# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.17/2025

Pw-09

Cw-17

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ನೀಲಪ್ಪ ನರಲಾದ |
| ತಂದೆಃಗಂಡನ ಹೆಸರುಃ | ಶ್ರೀ ಬರಮಪ್ಪ |
| ವಯಸ್ಸುಃ | 35 ವರ್ಷ |
| ಉದ್ಯೋಗಃ | ಪಿಎಸ್ಐ-1, ಹಿರೇಕೆರೂರು ಪಿ.ಎಸ್ |
| ವಾಸ ಸ್ಥಳಃ | ಹಿರೇಕೆರೂರು |

**ದಿನಾಂಕ:12.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ದಿನಾಂಕಃ15.06.2023 ರಿಂದ ಇಲ್ಲಿಯತನಕ ನಾನು ಹಾವೇರಿ ಜಿಲ್ಲೆಯ ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ-1 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ11.02.2025 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ನಾನು ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯದಲ್ಲಿದ್ದಾಗ ಚಾಸಾ-1ರವರು ಠಾಣೆಗೆ ಹಾಜರಾಗಿ ಒಂದು ದಸ್ತೂರು ಲಿಖಿತ ದೂರನ್ನು ನೀಡಿದರು. ಸದರಿ ದಸ್ತೂರು ಲಿಖಿತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನೆ ಸಂಖ್ಯೆ23/2025 ರಡಿಯಲ್ಲಿ ಭಾ.ನ್ಯಾಸಂ. ಕಲಂ.189(3), 191(2), 115(2), 74, 352 and 351(2) r/w 190 and Sec.3(1)(r), 3(2)(Va) of SC/ST (POA) Act ರಡಿಯಲ್ಲಿ ಪ್ರಕರಣವನ್ನು ದಾಖಲುಮಾಡಿಕೊಂಡು ಪ್ರ.ವ.ವರದಿಯನ್ನು ಮೂಲ ದೂರಿನೊಂದಿಗೆ ನ್ಯಾಯಾಲಯಕ್ಕೆ ಸಿಬ್ಬಂದಿ ಮೂಲಕ ರಹವಾನಿಸಿರುತ್ತೇನೆ. ಸದರಿ ದಸ್ತೂರ ಲಿಖಿತ ದೂರನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ-

1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಪ್ರಕರಣವು SC/ST(POA) ಕಾಯಿದೆಯಡಿಯಲ್ಲಿದ್ದ ಕಾರಣ ಮುಂದಿನ ತನಿಖೆಯನ್ನು ಚಾಸಾ–18 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಜೆ.ಬಿ.ಕೆ ವಕೀಲರಿಂದಃ**

2. ಪಿರ್ಯಾದಿಯು ಠಾಣೆಗೆ ಬರುವ ಮೊದಲೇ ದೂರನ್ನು ಬರೆದುಕೊಂಡು ತಂದಿದ್ದರು. ದೂರನ್ನು ಯಾರು ಬರೆದಿರುತ್ತಾರೆಂದು ಪಿರ್ಯಾದಿಯು ನನ್ನ ಮುಂದೆ ಹೇಳಿರುವುದಿಲ್ಲ. ಪಿರ್ಯಾದಿಯು ಸುಳ್ಳು ದೂರನ್ನು ದಾಖಲು ಮಾಡಿದ್ದು, ನಾನು ಅದರ ಮೇಲಿಂದ ಸುಳ್ಳು ಪ್ರ.ವ.ವರದಿಯನ್ನು ನೋಂದಣಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.